1620 (2306) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) –ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ನೀರಾವರಿ ಯೋಜನೆಯು ಯಾವಾಗ ಪ್ರಾರಂಭಗೊಂಡಿತು ಇದರ ಯೋಜನಾ ವೆಚ್ಚವೆಷ್ಟಿತ್ತು,

ಆ) ಈಗ ಇದರ ಯೋಜನಾ ವೆಚ್ಚ ಎಷ್ಟಾಗಿದೆ ಹಾಗೂ ಈ ಪೈಕಿ ಇದುವರೆವಿಗೆ ಖರ್ಚು ಮಾಡಿರುವ ಹಣವೆಷ್ಟು, (ಪೂರ್ಣ ವಿವರಗಳನ್ನು ಒದಗಿಸುವುದು)

ಇ) ಈ ಯೋಜನೆಯ ಕಾಮಗಾರಿಗಳು ಕಳಪೆ ಗುಣ ಮಟ್ಟದಿಂದ ಕೂಡಿರುವುದರ ಜೊತೆಗೆ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಈ ಯೋಜನೆಯ ಅನುಷ್ಠಾನದಲ್ಲಿ ಇದುವರೆವಿಗೂ ಎಷ್ಟು ಅವ್ಯವಹಾರಗಳು ಪತ್ತೆಯಾಗಿವೆ ಹಾಗೂ ಈ ಸಂಬಂಧವಾಗಿ ಎಷ್ಟು ಜನರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ, (ಪೂರ್ಣ ವಿವರಗಳನ್ನು ಒದಗಿಸುವುದು),

ಉ) ಈ ಯೋಜನೆಯ ಕಳಪೆ ಕಾಮಗಾರಿಗಳ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಬಗ್ಗೆ ಕ್ರಮ ಜರುಗಿಸುವಂತೆ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರೂ ಸಹ ಸರ್ಕಾರವು ಈ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ಭ್ರಷ್ಟರನ್ನು ರಕ್ಷಣೆ ಮಾಡುತ್ತಿರುವುದು ನಿಜವೇ,

ಊ) ಹಾಗಿದ್ದಲ್ಲಿ, ಈ ಸಂಬಂಧವಾಗಿ ಸರ್ಕಾರ ತಕ್ಷಣ ಈ ಬಗ್ಗೆ ಕ್ರಮ ಕೈಗೊಂಡು ಕಳಪೆ ಕಾಮಗಾರಿಗಳನ್ನು ನಿರ್ವಹಿಸಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದೇ?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಕಾರಂಜಾ ನೀರಾವರಿ ಯೋಜನೆಯು 1971–72ರಲ್ಲಿ ಪ್ರಾರಂಭಗೊಂಡಿತು ಪ್ರಾರಂಭದಲ್ಲಿ ಈ ಯೋಜನೆಯ ಅಂದಾಜು ಮೊತ್ತ 9 90 ಕೋಟಿ ರೂ ಆಗಿತ್ತು

ಆ) ಕಾರಂಜಾ ಯೋಜನೆಯ ಅಂದಾಜು ಮೊತ್ತ 2005–06 ದರಪಟ್ಟಿಯ ದರಗಳಂತೆ ರೂ 465 00 ಕೋಟಿ ಎಂದು ಅಂದಾಜಿಸಲಾಗಿದೆ ಇದರ ಪೈಕಿ ಈ ಯೋಜನೆಗೆ ಇಲ್ಲಿಯವರೆಗೂ ರೂ 454 48 ಕೋಟಿ ವೆಚ್ಚವಾಗಿರುತ್ತದೆ

ಇ) ಕಾರಂಜಾ ಯೋಜನೆಯ ಕೆಲವು ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದನ್ನು ಗಮನಿಸಿದ ಕೂಡಲೇ ಅವುಗಳನ್ನು ನಿಯಮಗಳ ಪ್ರಕಾರ ಸರಿಪಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಅಲ್ಲದೆ ಕೆಲವು ಕಾಮಗಾರಿಗಳು ಮಂದಗತಿಯಲ್ಲಿ ಸಾಗಿರುವುದನ್ನು ಗಮನಿಸಿ, ಟೆಂಡರ್ ಕರಾರಿನ ಮೇರೆಗೆ ಅಂತಹ ಗುತ್ತಿಗೆಗಳನ್ನು ರಿಸೆಂಡ್ (Rescind) ಮಾಡಿ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇರೆಗೆ ಬಾಕಿ ಕಾಮಗಾರಿಗೆ ಮರು ಟೆಂಡರ್ ಮೂಲಕ ಕೈಗೆತ್ತಿಕೊಳ್ಳಲಾಗಿದೆ

ಈ) ಈ ಯೋಜನೆಯ ಅನುಷ್ಠಾನದಲ್ಲಿ ಇದುವರೆವಿಗೂ 18 ಅವ್ಯವಹಾರದ ಪ್ರಕರಣಗಳು ಪತ್ತೆಯಾಗಿವೆ ಅದರಲ್ಲಿ 11 ಪ್ರಕರಣಗಳ ಇಲಾಖಾ ವಿಚಾರಣೆಗಳನ್ನು ನಡೆಸಲು ಕ್ರಮ ಕೈಗೊಂಡಿದೆ ಇನ್ನು 6 ಪ್ರಕರಣಗಳಲ್ಲಿ ಸಿವಿಲ್ ದಾವೆ ಹೂಡಲು ಪ್ರಕ್ರಿಯೆ ಜಾರಿಗೊಳಿಸಿದೆ ಇನ್ನು ಒಂದು ಪ್ರಕರಣದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಉ) ಈ ಯೋಜನೆಯ ಅಡಿಯಲ್ಲಿ ಕಳಪೆ ಮಟ್ಟದ 12 ಕಾಮಗಾರಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ಗುರುತಿಸಲಾದ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಗಾಗಿ ದೋಷಾರೋಪಣಾ ಪಟ್ಟಿ ಜಾರಿಗೊಳಿಸುವ ಬಗ್ಗೆ ಸರ್ಕಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ ಇಂತಹ ಕಳಪೆ ಕಾಮಗಾರಿಗಳನ್ನು ಸೂಕ್ತ ರೀತಿಯಲ್ಲಿ ಸರಿಪಡಿಸದಿದ್ದಲ್ಲಿ ಅಂತಹ ಗುತ್ತಿಗೆ ಕರಾರನ್ನು ಉಲ್ಲಂಘಿಸಿದ ಗುತ್ತಿಗೆದಾರರನ್ನು ಯಾವುದೇ ರೀತಿಯಲ್ಲಿ ರಕ್ಷಣೆ ಮಾಡುತ್ತಿರುವುದಿಲ್ಲ

ಊ) ಕಳಪೆ ಕಾಮಗಾರಿಗಳನ್ನು ಸೂಕ್ತ ರೀತಿಯಲ್ಲಿ ಸರಿಪಡಿಸದೇ ಗುತ್ತಿಗೆ ಕರಾರನ್ನು ಉಲ್ಲಂಘಿಸುವ ಗುತ್ತಿಗೆದಾರರ ವಿರುದ್ಧ ಗುತ್ತಿಗೆ ನೊಂದಣಿ ನಿಯಮಗಳ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚನೆಗಳನ್ನು ನೀಡಲಾಗುವುದು

ಅನುಬಂಧ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಾಜೇಂದ್ರ ವರ್ಮ ರವರು ಮಂಡಿಸಿರುವ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 2306ಕ್ಕೆ ವಿವರ

ಪ್ರಕರಣದ ವಿವರಗಳು	ಅಪಾದಿತ ಅಧಿಕಾರಿ/ನೌಕರರ ಹೆಸರು	ಕೈಗೊಂಡಿರುವ ಕ್ರಮ
ಕಾರಂಜಾ ಯೋಜನೆಯಲ್ಲಿ ಮೂರು ಕೋಟಿ ರೂ ಗಳ ಬೋಗಸ್ ಬಿಲ್ಲು ತಯಾರಿಸಿ ಅವ್ಯವಹಾರಪೆಸಗಿದ ಬಗ್ಗೆ	ಸಯ್ಯದ್ ಮಹಮ್ಮದ್ ಹುಸೇನ್, ಕಾಇಂ (ನಿವೃತ್ತ)	ವಿಚಾರಣಾ ವರದಿ ಬಂದಿದೆ ಪರಿಶೀಲನೆಯಲ್ಲಿದೆ
ಕಾರಂಜಾ ಯೋಜನೆಯ ಕಾಮಗಾರಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ ಇಲಾಖಾ ವಿಚಾರಣೆ	1 ವಿ ಹೆಚ್ ಅಗರಖೇಡ, ಅಇಂ (ನಿ) 2 ಕೆ ದಿನಕರರಾವ್, ಅಇಂ (ನಿ) 3 ಎಸ್ ಕೆ ದೇಸಾಯಿ, ಕಾಇಂ (ನಿ) 4 ಜೆ ಎಂ ಸದಾಶಿವಯ್ಯ , ಕಾಇಂ (ನಿ) 5 ಕೆ ಹನುಮಂತಪ್ಪ, ಕಾಇಂ (ನಿ) 6 ಹೆಚ್ ಪುಂಡಲೀಕ, ಕಾಇಂ 7 ಎಸ್ ಕೆ ಗಾಯತೊಂಡೆ, ಸಕಾಇಂ	ವಿಚಾರಣಾ ವರದಿ ಬಂದಿದೆ ಪರಿಶೀಲನೆಯಲ್ಲಿದೆ
ಕಾರಂಜಾ ಯೋಜನೆಯಲ್ಲಿ ಹೆಚ್ಚಿನ ಸಾಮಗ್ರಿ ಗಳನ್ನು ಖರೀದಿಸಿ ಮತ್ತು ಕಾಮಗಾರಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ ವಿರುದ್ಧ ಇಲಾಖಾ ವಿಚಾರಣೆ	1 ಬಿ ಎ ತಮಸಂಗೆ, ಸಇಂ 2 ಅರುಣ್ ಕುಮಾರ್, ಕಿಇಂ 3 ಹರಿಹರಸದಾಶಿವರಾವ್, ಕಾಇಂ	ಇವರುಗಳ ಮೇಲೆ ಇಲಾಖಾ ವಿಚಾರಣೆ ನಡೆಯುತ್ತಿದೆ

4 ಫಟ್ಟಾ ರವಿಕಿರಣ್, ಸಇಂ

5 ಮಲ್ಲಿಕಾರ್ಜುನ ಕರಂಜಿ, ಸಇಂ

6 ರವೀಂದ್ರ ಬಿ ಯರನಾಳ, ಕಿಇಂ

7 ಪಿ ಬಸವರಾಜ, ಕಿಇಂ

8 ಮ ಅಜರುಲ್ಲಹಕ್ ಸಿದ್ದಿಖಿ, ಸಇಂ

9 ಸೈಯದ್ ರಾಹದ್ ಅಲಿ, ಸಇಂ

10 ರಾಜೇಂದ್ರ, ಸಇಂ

11 ಕಲೀಮುದ್ದೀನ್, ಕಿಇಂ

12 ಪ್ರೇಮಸಿಂಗ್, ಸಕಾಇಂ

13 ಮ ಶಫಿಯುದ್ದೀನ್, ಸಇಂ

14 ಮೊಹಮ್ಮದ ಅಹಮದ್ ಹುಸೇನ್, ಸಇಂ

15 ಪಾಂಡುರಂಗ, ಕಿರಿಯ ಇಂಜಿನಿಯರ್

16 ಡಿ ಆರ್ ಕುಲಕರ್ಣಿ, ಸಇಂ

17 ಎನ್ ಟಿ ಕೋಳೇಕರ್, ಸಕಾಇಂ

18 ನವಾಬುದ್ದೀನ್, ಕಿಇಂ

19 ಅಶೋಕ್ ಕುಮಾರ್, ಕಿಇಂ

20 ರಾಚಪ್ಪ ಪಾಟೀಲ್, ಸಇಂ

ಕಾರಂಜಾ ಯೋಜನೆಯಲ್ಲಿ ಕಾಮಗಾರಿಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಾಮಗ್ರಿಗಳನ್ನು ಖರೀದಿಸಿದವರ ವಿರುದ್ಧ ಇಲಾಖಾ ವಿಚಾರಣೆ	1 ನಸರುಲ್ಲಾಖಾನ್, ಸಕಾಇಂ 2 ಅಶೋಕ್ ಜೋಯಿಡ, ಪ್ರದಉಪಾ 3 ಎಂ ಎಸ್ ಪಾಟೀಲ್, ಸಕಾಇಂ 4 ದಯಾನಂದಸ್ವಾಮಿ, ಪ್ರದಉಪಾ 5 ಗುಂಡಪ್ಪ ಮಂಡಗೊಳಿ, ಆ ಅ	ಇವರುಗಳ ಮೇಲೆ ಇಲಾಖಾ ವಿಚಾರಣೆ ನಡೆಯುತ್ತಿದೆ
ಕಾರಂಜಾ ಯೋಜನೆಯಲ್ಲಿನ ಕಾಮಗಾರಿಯಲ್ಲಿ ನಡೆದ ಅವ್ಯವಹಾರದ ಕುರಿತು ಇಲಾಖಾ ವಿಚಾರಣೆ	1 ಸುಧಾಕರ ಕುಲಕರ್ಣಿ, ಸಕಾಇಂ 2 ಖಾಜಾ ಮಸೂದ್, ಸಕಾಇಂ	ಇವರುಗಳ ವಿರುದ್ಧ ಇಲಾಖಾ ವಿಚಾರಣಾ ವರದಿ ಬಂದಿದ್ದು ಪರಿಶೀಲನೆಯಲ್ಲಿದೆ
ಕಾರಂಜಾ ಯೋಜನೆಯಲ್ಲಿ ಸ್ಫೋಟಕ ವಸ್ತುಗಳ ಕಳವು ಬಗ್ಗೆ ಇಲಾಖಾ ವಿಚಾರಣೆ	1 ಬಸವರಾಜ ಸಲಗಾರ, ಸಕಾಇಂ 2 ಅಶೋಕ ಡೋಯಿಜಡೆ, ಪ್ರದಉಪಾ 3 ಎಲ್ ಎ ವಿಶ್ವನಾಥ್, ಕಾವಲುಗಾರ 4 ಮಹಮ್ಮದ್ ಖಾಜಾ, ಕಾವಲುಗಾರ 5 ಮನೋಹರ್, ಕಾವಲುಗಾರ 6 ಅಬ್ದುಲ್ ಅಮೀದ್, ಕಾವಲುಗಾರ 7 ಗಣಪತಿ, ಕಾವಲುಗಾರ 8 ಹಣಮಂತ, ಕಾವಲುಗಾರ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ

ಕಾರಂಜಾ ಯೋಜನೆ, ಕೆಪಿಸಿ ವಿಭಾಗ, ಭಾಲ್ಕಿ ಭಾತಾಂಬ್ರಾ, ಬೀದರ್ ವಿಭಾಗಗಳಲ್ಲಿ ನೀರಿನ ಸಾಮರ್ಥ್ಯ ಕೊಡುವಂತದಲ್ಲದ ಕಾಮಗಾರಿ ಗಳನ್ನು ಕೈಗೆತ್ತಿಕೊಂಡು ಆರ್ಥಿಕ ನಷ್ಟ ಉಂಟು ಮಾಡಿದವರ ವಿರುದ್ಧ ಇಲಾಖಾ ವಿಚಾರಣೆ	1 ಎಲ್ ಎಲ್ ಮೈತ್ರಿ, ಸಕಾಇಂ 2 ಪಿ ಬಿ ನಂದೂರ್, ಸಕಾಇಂ 3 ಗುಣಶೀಲ ಅಹಮದ್, ಸಕಾಇಂ 4 ಶಂಕರಪ್ಪ ಸುರವಾರ, ಸಕಾಇಂ 5 ಎಸ್ ಜಿ ಗುಗ್ಗವಾಡ, ಸಕಾಇಂ 6 ಪಿ ನಂಜೇಗೌಡ, ಸಕಾಇಂ 7 ಹರಿಹರಸದಾಶಿವರಾವ್, ಕಾಇಂ 8 ಎಸ್ ಎ ಶಫೀ ಅಹಮದ್, ಸಕಾಇರ 9 ಷಬ್ಬಾ ರವಿಕಿರಣ್, ಸಇಂ 10 ಲಕ್ಷ್ಮಣ್, ಸಕಾಇಂ 11 ಹೆಚ್ ಆರ್ ಕೃಷ್ಣಮೂರ್ತಿ, ಸಕಾಇಂ 12 ಎಸ್ ಕೆ ಗಾಯತೊಂಡ, ಸಕಾಇಂ 13 ಬಿ ಎಸ್ ಬಿರಾದಾರ, ಸಇಂ 14 ಮೋಹನ್, ಬಾಚಾ, ಲೆಅ 15 ದೇವೆಂದ್ರಪ್ಪ, ಲೆಅ 16 ಗುಂಡಪ್ಪ, ಲೆಅ 17 ವೀರಶೆಟ್ಟಿ, ಲೆಅ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ

ಕಾರಂಜಾ ಯೋಜನೆಯ ಕೆಪಿಸಿ ವಿಭಾಗ, ನಂ 1, ಬೀದರ್‌ನಲ್ಲಿ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ ಉಲ್ಲಂಘಿಸಿ ಕಾಮಗಾರಿಯನ್ನು ನಿರ್ವಹಿಸಿದವರ ವಿರುದ್ಧ ಇಲಾಖಾ ವಿಚಾರಣೆ	1 ಹರಿಹರಸದಾಶಿವರಾವ್, ಕಾಇಂ 2 ಎಂ ಎಸ್ ನಾಗರಾಜು, ಕಾಇಂ 3 ಲಕ್ಷ್ಮಣ್, ಸಕಾಇಂ 4 ಸೂರ್ಯಕಾಂತ ಸೇಂದ್ರೆ, ಸಇಂ 5 ವಿದ್ಯಾಸಾಗರ್, ಸಇಂ 6 ಸುಭಾಷ್, ಕಿಇಂ 7 ಅಡೆಪ್ಪ ಕಿಇಂ 8 ವಿ ಜಗನ್ನಾಧರಾವ್, ಲೆಅ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ
ಬೀದರ್ ಜಿಲ್ಲೆ, ಕಾರಂಜಾ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ವಿಭಾಗ –2, ಭಾಲ್ಕಿ ಇಲ್ಲಿ ಉಗ್ರಾಣ ಸಾಮಗ್ರಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಇಲಾಖಾ ವಿಚಾರಣೆ	1 ಅನಿಲ್‌ಕುಮಾರ್‌ಗರುಡಕರ್, ಸಕಾಇಂ 2 ಎಸ್ ಎ ಧಗೆ, ಲೆ ಅ	ಇವರುಗಳು ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ